12

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ          ದಿನಾಂಕ : DATE 21/11/20

---

**ಆತಂಕಕಾರಿ** ಬೆಂಗಳೂರಲ್ಲಿ ನಿನ್ನೆ 19, ಚಿತ್ರದುರ್ಗದಲ್ಲಿ 16 ಕೇಸ್ ಪತ್ತೆ

# ರಾಜ್ಯದಲ್ಲಿ ಮತ್ತೆ 60 ಕಾಲೇಜು ವಿದ್ಯಾರ್ಥಿಗಳಲ್ಲಿ ಸೋಂಕು ಪತ್ತೆ

## ಕಾಲೇಜು ಆರಂಭವಾಗಿ 4 ದಿನದಲ್ಲಿ ಸಂಖ್ಯೆ 123ಕ್ಕೇರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯಾದ್ಯಂತ ಪದವಿ ಮತ್ತು ಸ್ನಾತಕೋತ್ತರ ತರಗತಿಗಳು ಪುನಾರಂಭಗೊಂಡ ಬೆನ್ನಲ್ಲೇ ಕೊರೋನಾ ಸೋಂಕಿತ ವಿದ್ಯಾರ್ಥಿಗಳ ಸಂಖ್ಯೆಯೂ ದಿನೇ ದಿನೆ ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ. ಶುಕ್ರವಾರವೊಂದೇ ದಿನ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 60 ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟಿದ್ದು, ಒಟ್ಟಾರೆ ಸೋಂಕಿಗೆ ತುತ್ತಾದ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕು ದಿನಗಳಲ್ಲಿ 123ಕ್ಕೇರಿದೆ. ಕಾಲೇಜು ಆರಂಭವಾದಂದಿನಿಂದ ಈವರೆಗೆ ಒಟ್ಟಾರೆ 163 ವಿದ್ಯಾರ್ಥಿಗಳು, ಸಿಬ್ಬಂದಿಯಲ್ಲಿ ಸೋಂಕು ಪತ್ತೆಯಾಗಿದೆ.

ರಾಜ್ಯಾದ್ಯಂತ ಅಂತಿಮ ಡಿಗ್ರಿ, ಪಿಜಿ, ಡಿಪ್ಲೊಮಾ ತರಗತಿಗಳು ಮಂಗಳವಾರದಿಂದಲೇ ಆರಂಭವಾಗಿದೆ. ಸರ್ಕಾರದ ಸೂಚನೆಯಂತೆ ಕಾಲೇಜಿಗೆ ಆಗಮಿಸುವ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು, ಕಾಲೇಜು ಸಿಬ್ಬಂದಿಗೆ ಕೋವಿಡ್

### ಕಾಲೇಜಲ್ಲಿ ಅಂಟಿದ ಸೋಂಕಲ್ಲ



ಹೆಚ್ಚಿನ ವಿದ್ಯಾರ್ಥಿಗಳು ಕೋವಿಡ್ ಪರೀಕ್ಷೆಗೆ ಒಳಪಡುತ್ತಿರುವುದರಿಂದ ಕೆಲವರಲ್ಲಿ ಸೋಂಕು ಪತ್ತೆ ಆಗುತ್ತಿದೆ. ಅವರಿಗೆ ತಕ್ಷಣ ಚಿಕಿತ್ಸೆ ನೀಡಲಾಗುತ್ತಿದೆ. ಪೋಷಕರು ಆತಂಕ ಪಡಬೇಕಿಲ್ಲ. ಈಗ ಪಾಸಿಟಿವ್ ಬಂದವು ಕಾಲೇಜಿಗೆ ಬಂದಿದ್ದರಿಂದ ತಗಲಿಡ ಸೋಂಕಲ್ಲ. ಕಾಲೇಜಿಗೆ ಬರುವುದಕ್ಕಿಂತ ಮೊದಲೇ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗಿದೆ.

---

# ಮತ್ತೆ 60 ವಿದ್ಯಾರ್ಥಿಗಳಲ್ಲಿ ಸೋಂಕು


◄ ಮೊದಲ ಪುಟದಿಂದ


ವರದಿ ಒಂದೊಂದಾಗಿಯೇ
ಇದೀಗ ಕೋವಿಡ್ ಪರೀಕ್ಷೆಗೊಳಗಾದವರ
ಬಹಿರಂಗವಾಗುತ್ತಿದ್ದು ಈವರೆಗೆ ಪರೀಕ್ಷೆ ಮಾಡಿಸಿಕೊಂಡ ವಿದ್ಯಾರ್ಥಿಗಳಲ್ಲಿ
ಕೋವಿಡ್‌ಗೆ ತುತ್ತಾದವರ ಸಂಖ್ಯೆ ನೂರರ ಗಡಿ ದಾಟಿರುವುದು ಆಘಾತ
ಮೂಡಿಸಿದೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚಳವಾಗುವ ಆತಂಕ
ಮೂಡಿದೆ. ಶುಕ್ರವಾರ ಬೆಂಗಳೂರಲ್ಲಿ 19, ಚಿತ್ರದುರ್ಗದಲ್ಲಿ 16, ಉಡುಪಿಯಲ್ಲಿ
7, ಚಾಮರಾಜನಗರದಲ್ಲಿ 10, ರಾಮನಗರದಲ್ಲಿ 4, ಧಾರವಾಡದಲ್ಲಿ 3, ಕೋಲಾ
ರದಲ್ಲಿ ಇಬ್ಬರು ವಿದ್ಯಾರ್ಥಿಗಳಲ್ಲಿ ಸೋಂಕು ದೃಢಪಟ್ಟಿದೆ. ಇನ್ನು ಬೆಂಗಳೂರಲ್ಲಿ
13, ಬೆಳಗಾವಿಯಲ್ಲಿ 6, ಧಾರವಾಡದಲ್ಲಿ 4 ಮತ್ತು ಗದಗದಲ್ಲಿ ಒಬ್ಬ ಸಿಬ್ಬಂದಿಗೆ
ಸೋಂಕು ತಗುಲಿದೆ. ಕಾಲೇಜು ಆರಂಭವಾದ ಬಳಿಕ ರಾಜ್ಯದಲ್ಲಿ ಕೋವಿಡ್‌ಗೆ
ತುತ್ತಾದ ವಿದ್ಯಾರ್ಥಿಗಳ ಅತೀ ಹೆಚ್ಚಿನ ಪ್ರಕರಣ ಬೆಂಗಳೂರಲ್ಲಿ ಪತ್ತೆಯಾಗಿದ್ದು,
ಈವರೆಗೆ ರಾಜಧಾನಿಯಲ್ಲಿ 62 ವಿದ್ಯಾರ್ಥಿಗಳು, 27 ಸಿಬ್ಬಂದಿ ಸೇರಿ ಒಟ್ಟು 89
ಮಂದಿಯಲ್ಲಿ ಸೋಂಕು ಬೆಳಕಿಗೆ ಬಂದಿದೆ. ಇನ್ನು ಚಿತ್ರದುರ್ಗದಲ್ಲಿ 17,
ಬಳ್ಳಾರಿಯಲ್ಲಿ 7, ಚಾಮರಾಜನಗರ, ಚಾಮರಾಜನಗರ ತಲಾ 10 ವಿದ್ಯಾರ್ಥಿ
ಗಳು, ಸಿಬ್ಬಂದಿಯಲ್ಲಿ ಕೋವಿಡ್ ಪತ್ತೆಯಾಗಿದೆ. ಗುರುವಾರವಷ್ಟೇ ರಾಜ್ಯದಲ್ಲಿ
77ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಿಬ್ಬಂದಿಯಲ್ಲಿ ಕೋವಿಡ್ ಪತ್ತೆಯಾಗಿತ್ತು.